ಸಂಸ್ಥೆಯವರು, ನಗರದ ವಿವಿಧ ಭಾಗಗಳಲ್ಲಿ ಮುಖ್ಯವಾಗಿ ಸುಲ್ತಾನ್ ಪಾಳ್ಯ, ಕಾವಲ್ ಬೈರಸಂದ್ರ, ಹೆನ್ನೂರು, ಮುನಿರೆಡ್ಡಿಪಾಳ್ಯ, ಆಗರಮ್, ಚೋಳನಾಯಕಹಳ್ಳಿ, ಅಮೃತಹಳ್ಳಿಗಳಲ್ಲಿ ಪರಿಚಯಿಸಿರುತ್ತಾರೆ. ಈಗ ಇದು ಹೆಚ್ಚಿನ ಸಂಖ್ಯೆಯಲ್ಲಿದೆ. ಈ ಹುಳುಗಳನ್ನು ಸಿಂಪಡಿಸುವ ಕಾರ್ಯಕ್ರಮವನ್ನು ನಗರದ ವಿವಿದೆಡೆಗಳಲ್ಲಿ ನಗರ ಪಾಲಿಕೆಯ ಎಲ್ಲಾ ನಗರಸಭಾ ಸದಸ್ಯರು ಭಾಗವಹಿಸುವ ಮೂಲಕ ತೆಗೆದುಕೊಂಡಿದೆ.

ಈ ಹುಳುಗಳು ಪಾರ್ಥೇನಿಯಂ ಕಳೆಯ ಎಲೆ ಕಾಂಡ ಮುಂತಾದುವುಗಳನ್ನು ಮಳೆಗಾಲದಲ್ಲಿ ತಿಂದು ಭೂಮಿಯೊಳಗೆ ಸುಮಾರು 6-7 ತಿಂಗಳ ಕಾಲ ಜೀವಿಸಬಲ್ಲದ್ದಾಗಿರುತ್ತದೆ.

ದಿನಾಂಕ 21-8-1991 ಆಚರಿಸಲಾದ ಪಾರ್ಥೇನಿಯಂ ಕಳೆಯ ನಿವಾರಣಾ ಸಪ್ತಾಹದ ಅಂಗವಾಗಿ ಹುಳುಗಳನ್ನು ಸಿಂಪಡಿಸುವ ಮತ್ತು ತೆಗಸಿ ಬೀಜಗಳನ್ನು ನಗರದ ವಿವಿಧ ಭಾಗಗಳಲ್ಲಿ ಬಿತ್ತುವ ಕಾರ್ಯಕ್ರಮವನ್ನು ನಗರಪಾಲಿಕೆಯು ತೆಗೆದುಕೊಂಡಿದೆ. ಈ ನಾಲ್ಕು ಪದ್ಧತಿಗಳನ್ನು ಅನುಸರಿಸುವ ಮೂಲಕ ಪಾರ್ಥೇನಿಯಂ ಕಳೆಯನ್ನು 2-3 ವರ್ಷಗಳಲ್ಲಿ ನಿಯಂತ್ರಿಸುವ ನಂಬಿಕೆಯನ್ನು ನಗರಪಾಲಿಕೆಯು ಹೊಂದಿದೆ.

ಗ್ರಾಮಾಂತರ ಪ್ರದೇಶದಲ್ಲಿ ಸಾರಾಯಿ ಅಂಗಡಿಗಳ ರದ್ದತಿ

2286 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮಾಂತರ ಪ್ರದೇಶದ ಬಹುತೇಕ ಜನರ ಬಡತನಕ್ಕೆ ಸಾರಾಯಿ ಕುಡಿತವೇ ಕಾರಣವೆಂಬ ವಿಚಾರವು ನಿಜವಲ್ಲವೇ?*

ಆ) *ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಸಾರಾಯಿ ಅಂಗಡಿಗಳನ್ನು ಮುಚ್ಚಲು ಸರಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಅಲ್ಲ- ಬಡತನಕ್ಕೆ ಇದೊಂದೇ ಕಾರಣವಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಟ್ಲ ಅರಕ್ಷಕ ಠಾಣೆಗೆ ವಾಹನ ಒದಗಿಸುವುದು

2179 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಅರಕ್ಷಕ ಠಾಣೆಗಡಿ ಪ್ರದೇಶದಲ್ಲಿರುವುದರಿಂದ ಅದಕ್ಕೆ ವಾಹನದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ವಾಹನ ಸೌಲಭ್ಯವಿಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ಮತ್ತು ಠಾಣೆ ವ್ಯವಹಾರಗಳಿಗೆ ತೊಂದರೆಯಾಗಿಲ್ಲವೇ?*

ಇ) *ವಾಹನ ಒದಗಿಸುವ ಇಚ್ಛೆ ಸರ್ಕಾರಕ್ಕಿದೆಯೇ? ಹಾಗಿದ್ದಲ್ಲಿ ಅದನ್ನು ಎಂದಿನಿಂದ ಒದಗಿಸಲಾಗುವುದು.*

ಶ್ರೀ ಧರ್ಮಸಿಂಗ್ (ಗೃಹ ಸಚಿವರು) ;

ಅ) ಹೌದು

ಆ) ಹೌದು

ಇ) ಹೌದು, ಹಾಲಿ ವ್ಯವಸ್ಥೆಯಲ್ಲಿ ಪ್ರತಿಯೊಂದು ಪೋಲೀಸ್ ಠಾಣೆಗೂ ಒಂದು ಪ್ರತ್ಯೇಕಜೀಪು ವಾಹನ ಒದಗಿಸಲಾಗುತ್ತಿಲ್ಲ. ಆದರೂ ಇನ್ನೂ ಜೀಪ್‌ಗಳನ್ನು ಪೋಲೀಸ್ ಇಲಾಖೆ ಪಡೆದುಕೊಳ್ಳಲು ಅಗತ್ಯವಾದ ಹಣವನ್ನು ಒದಗಿಸಿಕೊಳ್ಳಲು ಪ್ರಯತ್ನಿಸುತ್ತಿರಲಾಗಿದೆ.